ಕಡೆ ಕೋಣೆಗಳು. ಕೆಳಗಿನಂತೇ ನೆಲಕ್ಕೆ ಹಾಸಿದ ಅಮೃತಶಿಲೆಯ ಹಾಸುಗಳು ಸವೆದಿದ್ದವು. ಬಲಗಡೆ ಸಾಗಿದವರಿಗೆ ಎರಡನೆ ಕೋಣೆಯಲ್ಲಿ ಬೆಳಕು ಕಾಣಿಸಿತು. ನೇರವಾಗಿ ಅಲ್ಲಿ ಕರೆದೊಯ್ದ ಆನಂದ. ದೇಶ್ವಂತರು ಹಳೆಯ ವಿನ್ಯಾಸದ ಮರದ ಕುರ್ಚಿಯಲ್ಲಿ ಕುಳಿತಿದ್ದರು. ಎದುರು ಮೇಜಿನ ಮೇಲೆ ಪುಸ್ತಕವಿತ್ತು. ಅಂತಹ ಜಾಗದಲ್ಲಿ ಮೊದಲ ಸಾರಿ ಬಂದ ಅವಳು ಏನು ಮಾಡಲು ತೋಚದೆ ಗೌರವದಿಂದ ನಿಂತುಬಿಟ್ಟಳು. ತಲೆಯೆತ್ತಿ ನೋಡಿದ ದೇಶ್ವಂತರು, 'ಹುಮ್... ಆನಂದ ಹೇಳಿದಾನಮ್ಮ. ಜ್ಞಾನದ ಹಸಿವೆ ತಿಂದಷ್ಟೂ ಹೆಚ್ಚುವ ಹಸಿವೆ. ಹೀಗಾಗಿ ಬೆಳವಣಿಗೆ ನಿರಂತರ. ಏನು ನೋಡಬೇಕೊ ಆನಂದ ತೋರಿಸುತಾನೆ' ಮಂದಹಾಸ ಬೀರಿ ತಲೆಯಾಡಿಸಿದರು. ಮತ್ತೆ ಎದುರಿನ ಪುಸ್ತಕದಲ್ಲಿ ಮುಳುಗಿದರು.

ವಾಪಸು ಎಡಗಡೆ ಕರೆದೊಯ್ದ ಆನಂದ ಕೊನೆಯಲ್ಲಿದ್ದ ಕೋಣೆಯ ಬೀಗ ತೆರೆದು ಸ್ವಿಚ್ ಹಾಕಿದ. ಉಪಯೋಗಿಸದಾಗ ಮುಚ್ಚಿಯೆ ಇರುವ ಕಾರಣ, ಅಲ್ಲಿ ಹಳೆ ಗಾಳಿಯ ವಾಸನೆಯಿತ್ತು. ಕೋಣೆಯ ತುಂಬಾ ಯಾವ್ಯಾವುದೊ ವಸ್ತುಗಳನ್ನು ಇಡಲಾಗಿತ್ತು. ಕೆಲವನ್ನು ಗೋಡೆಗೆ ಹೊಡೆದ ಗಿಳಿಗೂಟಗಳಿಗೆ ನೇತುಹಾಕಿದ್ದರೆ ಕೆಲವನ್ನು ಮರದ ಅಟ್ಟಣಿಗೆಗಳ ಮೇಲೆ ಜೋಡಿಸಿಡಲಾಗಿತ್ತು. ಮರದ ಕಪಾಟುಗಳೂ ಇದ್ದವು.

ಗೋಡೆಗೆ ನೇತುಹಾಕಿದ್ದ ಒಂದು ವಸ್ತುವನ್ನು ತೆಗೆದ ಆನಂದ. ಎಡಗೈಯಲ್ಲಿ ಹಿಡಿದು ಬಲಗೈಯಲ್ಲಿ ಅದರ ಹಿಡಿಕೆ ಹಿಡಿದು ಹೊರಗೆಳೆದ. ಒರೆಯಿಂದ ಹೊರಬಂದ ಖಡ್ಗ ಅವನ ಕೈಯಲ್ಲಿ ವಿರಾಜಿಸಿತು. 'ಇದು ಸುಮಾರು ಸಾವಿರ ವರ್ಷಕ್ಕೂ ಹಳೆಯ ಖಡ್ಗವಂತೆ' ಎನ್ನುತ್ತ ಅನುಮಾನಿಸುತ್ತಿದ್ದ ಅವಳತ್ತ ಅದನ್ನು ಚಾಚಿದ. ಅಂದುಕೊಂಡಿದ್ದಕ್ಕಿಂತ ಭಾರವಾಗಿತ್ತು. ಹಿಡಿದುಕೊಂಡು ಬೆರಳಿಂದ ನಿಧಾನವಾಗಿ ಸವರಿದಳು. ಮೈ ಜುಮ್ಮೆಂದಿತು.

'ಇದು ಯುದ್ಧಗಳಲ್ಲಿ ಭಾಗವಹಿಸಿರಬಹುದು ಅಲ್ವ?' ತದೇಕಚಿತ್ತದಿಂದ ಅದನ್ನು ಪರೀಕ್ಷಿಸುತ್ತ ಕೇಳಿದಳು. 'ಖಂಡಿತ ಹೌದು. ಇದು ಬೇಕಷ್ಟು ರಕ್ತ ಕುಡಿದಿದೆ ಅಂತ ಅಜ್ಜ ಹೇಳ್ತಾರೆ. ನಮ್ಮ ಪೂರ್ವಜ ವೈದ್ಯರೊಬ್ಬರು ಮಾಡಿದ ವಿಶಿಷ್ಟ ಕೆಲಸಕ್ಕೆ ಕದಂಬ ರಾಜನೊಬ್ಬ ತನ್ನ ಖಡ್ಗವನ್ನೇ ಬಹುಮಾನವಾಗಿ ಕೊಟ್ಟನಂತೆ. ಅಜ್ಜನಿಗೆ ಆ ವಿಷಯ ಗೊತ್ತು. ನವರಾತ್ರಿಯ ಮಾರ್ನೌಮಿಯ ದಿನ ಇದಕ್ಕೆ ತಪ್ಪದೆ ಪೂಜೆ ಮಾಡಿ ಸಾಂಕೇತಿಕ ಬಲಿ ಕೊಡುತ್ತೇವೆ'.

ಅಲ್ಲಲ್ಲಿ ಮಸುಕಾಗಿದ್ದರೂ ಖಡ್ಗ ಹೊಳಪನ್ನು ಪೂರ್ತಿ ಕಳಕೊಂಡಿರಲಿಲ್ಲ. ಒಂದು ಕೈಯಲ್ಲಿ ಹಿಡಿಯುವುದು ಪ್ರಯಾಸವೆನಿಸುವ ಇದನ್ನ ಗಿರಿಗಿರಿ ತಿರುಗಿಸುವ ಯೋಧನ ಕಸುವು ಎಷ್ಟಿರಬೇಕು ಎನಿಸಿ ಬೆರಗುಪಟ್ಟಳು. ಆನಂದ ಒಂದು ಕಪಾಟಿನ ಬಾಗಿಲು ತೆರೆದ. ತಾಳೆಗರಿಯ ಕಟ್ಟುಗಳನ್ನು ಓರಣವಾಗಿ ಜೋಡಿಸಿಟ್ಟಿದ್ದರು. 'ಈಗೆಲ್ಲೂ ಸಿಗದ ಆಯುರ್ವೇದ ಗ್ರಂಥಗಳು. ಸಂಸ್ಕೃತದಲ್ಲಿದೆ' ಅಂದವ ಮತ್ತೊಂದು ಕಪಾಟಿನ ಬಾಗಿಲು ತೆರೆದ. 'ಹಳೆಯ ಕಡತಗಳು, ಆಗಿನ ಲಿಪಿ. ಅಜ್ಜ ಓದುತಾರೆ. ಲೇವಾದೇವಿ, ತೆರಿಗೆ ಏನೇನೊ ಇದೆ.'

'ಆಗಲು ಈ ಆದಾಯ ತೆರಿಗೆಯಿತ್ತಾ?' ಕುತೂಹಲ ಉಂಟಾಯಿತವಳಿಗೆ.

'ಆದಾಯ ತೆರಿಗೆ ಅಂತಲ್ಲ; ತೆರಿಗೆಯಿತ್ತು. ತೆರಿಗೆಯ ಪರಿಕಲ್ಪನೆ ಪುರಾತನವಾದ್ದು. ಮತ್ತೆ ರಾಜಾದಾಯ ಇನ್ನೆಲ್ಲಿಂದ ಬರಬೇಕು? ಗೊತ್ತ ನಿಂಗೆ? 'ಪೆರ್ಜುಂಕ' ಅಂದರೆ ಹೊರೆತೆರಿಗೆ. ಮಾರಾಟ ತೆರಿಗೆಗೆ 'ಬಿಲ್ಕೊಡ' ಅನ್ನುತ್ತಿದ್ದರು. 'ಕಿರುಕುಳ' ಅಂದರೆ ಜಮೀನಿನ ಕಂದಾಯ. ಆ ಕಾಲದಲ್ಲೆ ಸಾಮಾಜಿಕ ಸುರಕ್ಷಾ ತೆರಿಗೆಯಿತ್ತು. 'ವಡ್ಡ ರಾವುಳ' ಅಂತ ಹೆಸರದಕ್ಕೆ.

ಗಡಿಯಾರ ಗಂಟೆ ಬಾರಿಸುವ ಸದ್ದು ಕೇಳಿಸಿತು. ಹನ್ನೊಂದು ಗಂಟೆಯಾಯಿತು ಅನ್ನೋ ಅರಿವಾದ ಆನಂದ ಚಂದನಿಕಾಳನ್ನು ಕೆಳಗೆ ಕರೆತಂದ.

***

## ಜನಪ್ರಿಯತೆಯ ಹಾದಿಯಲ್ಲಿ...

ಧಾರಾವಾಹಿಯ ಜನಪ್ರಿಯತೆ ಏರತೊಡಗಿತ್ತು. ವಿಶೇಷವಾಗಿ ಮಾರುವೇಷದಲ್ಲಿರುವ ಚಂದನಿಕಾ ಮತ್ತು ಅವಳಿರುವ ಭವನ, ಮತ್ತದರ ಪರಿಸರದ ಸನ್ನಿವೇಶಗಳು ಜನರನ್ನು ಆಕರ್ಷಿಸಿತ್ತು. ಟಿಆರ್‌ಪಿಯನ್ನು ಗಮನಿಸಿ ಕತೆಯ ಆ ಭಾಗವನ್ನು ಇನ್ನಷ್ಟು ವಿಸ್ತರಿಸಬೇಕು ಅಂತ ನಾಯ್ಡು ಮೇಲೆ ಒತ್ತಡ ಹೆಚ್ಚತೊಡಗಿತ್ತು. ಆತ ದೇಶ್ವಂತರನ್ನು ಭೆಟ್ಟಿಯಾಗಿ, ತನಗೆ ಇನ್ನೊಂದು ತಿಂಗಳು ಅವಧಿಯನ್ನು ವಿಸ್ತರಿಸಿಕೊಡಿ ಅಂತ ಕೇಳಿಕೊಂಡ. ಇಲ್ಲಿಯವರೆಗಿನ ಅನುಭವದ ಪ್ರಕಾರ ದೇಶ್ವಂತರಿಗೂ ಚಿತ್ರೀಕರಣದಿಂದ ಅಂತಹ ತೊಂದರೆಯೆನಿಸಿರಲಿಲ್ಲ. ಅವರು ಒಪ್ಪಿದರು.

ಊರಿನವರಿಗಲ್ಲದೆ ಅಕ್ಕಪಕ್ಕದ ಊರುಗಳಿಗೆ, ಅವರಿಂದ ಅವರ ಸಂಬಂಧಿಕರು ಪರಿಚಿತರಿಗೆ, ಹೀಗೆ ಚಿತ್ರೀಕರಣ ನಡೆಯುವುದು ಇಂತಹ ಸ್ಥಳದಲ್ಲಿ ಎಂಬುದು ಗೊತ್ತಾಗತೊಡಗಿತ್ತು. ಈ ಕಡೆ ಬಂದಾಗ ಶೂಟಿಂಗ್ ಅಥವಾ ನಟ ನಟಿಯರು ಕಣ್ಣಿಗೆ ಬೀಳಬಹುದೇನೋ ಅಂತ ಅಲ್ಲಿ ಬರುತ್ತಿದ್ದರು. ಒಳಗಡೆ ಸಿನಿವ್ಯಾನು, ಜನ ನಿಂತಿದ್ದನ್ನು ನೋಡಿದರಂತು ಕಾತರ ಹೆಚ್ಚುತ್ತಿತ್ತು. ಸಂಬಂಧಿಸದ ಜನ ಸುಮ್ಮನೆ ಒಳಬರದಂತೆ ಗೇಟಿನಲ್ಲಿ ಒಬ್ಬನನ್ನು ಕಾಯಮ್ಮಾಗಿ ಹಾಕಿದ್ದರು. ಅಲ್ಲಿ ಜನ ನಿಂತು ಈ ಕಡೆ ನೋಡಿ ಹೋಗುತ್ತಿದ್ದರು. ಒಮ್ಮೊಮ್ಮೆ ಶೂಟಿಂಗಿನ ನೋಟ ಕೆಲವರಿಗೆ ಸಿಗುವುದೂ ಇತ್ತು.

***

ಬೆಳಗ್ಗೆ ನಿಶೀತ ಪಾಟೀಲ ಗೇಟಿನ ಹತ್ತಿರ ಬಂದವ ಫೋನು ಮಾಡಿದ. ಆನಂದ ಖುದ್ದಾಗಿ ಹೋಗಿ ಅವನನ್ನು ಒಳಗೆ ಕರೆತಂದ. ಕಟ್ಟಡವನ್ನು ನೋಡುತ್ತಲೆ ಒಳಗೆ ಹೋಗಿ ಕುಳಿತವನ ಕಣ್ಣು ಅತ್ತಿಂದಿತ್ತ ಸುತ್ತಾಡುತ್ತಲೆ ಇತ್ತು. ಇಂತದೊಂದು ಇದೆಯ ಅಂತ ಬೆಕ್ಕಸ ಬೆರಗಾಗಿದ್ದ. ಮೂರಡಿ ಮಿಕ್ಕಿದ ದಪ್ಪದ ಮಣ್ಣಿನ ಗೋಡೆಗಳು. ದೊಡ್ಡ ಮರವನ್ನೇ ನಾಲ್ಕು ಕಡೆ ಸಪಾಟು ಮಾಡಿ ಗೋಡೆಯ ಮೇಲಿಟ್ಟಂತೆ ಕಾಣುವ ಗಾತ್ರದ ತೊಲೆಗಳು. ತೊಲೆಯನ್ನಾಧರಿಸಿ ಹಾಕಿದ ಜಂತಿ, ಜಂತಿಯ ಮೇಲೆ ಜೋಡಿಸಿದ ಹಲಗೆಗಳು. ನೆಲದಿಂದ ನಿಲ್ಲಿಸಿದ ದಪ್ಪನೆ ಕೆತ್ತನೆ ಮಾಡಿದ ಕಂಬ, ಕಂಬಕ್ಕು ತೊಲೆಗು ನಡುವೆ ಎರಡು ತುದಿಯಲ್ಲಿ ಗಿಳಿ, ನವಿಲಿನ ನಕ್ಷೆ ಕೊರೆದ ಬೋದಿಗೆ. ಹಜಾರದಿಂದ ಒಳಗಡೆ ಹೋಗಲಿರುವ ಪ್ರಧಾನ ಬಾಗಿಲು ಸುಮಾರು ಐದಡಿಯಿರಬಹುದು ಅನಿಸಿತು. ಆದರೆ ಬಾಗಿಲ ಎರಡು ಬಾಹುಗಳು ಎರಡಡಿಗೂ ದಪ್ಪವಿದ್ದವು. ಬಾಹು ಬಳ್ಳಿಗಳ, ವಿವಿಧ ಆಕೃತಿಗಳ ಚಿತ್ರ ಕೆತ್ತನೆ ಮಾಡಿದ ನಾಕಾರು ಬೇರೆ ಬೇರೆ ಬಣ್ಣದ ಮರಗಳ ಪಟ್ಟಿಗಳ ಜೋಡಣೆಯಿಂದ ತಯಾರಾಗಿತ್ತು. ಬಾಗಿಲಿನ ದಪ್ಪ ನಾಲ್ಕಿಂಚಿರಬಹುದು. ಅದರ ಮೇಲೆ ಚೌಕಗಳ ವಿನ್ಯಾಸ ಮಾಡಿ, ಚೌಕದ ಕೇಂದ್ರದಲ್ಲಿ ಹಿತ್ತಾಳೆಯ ದಾಸವಾಳ ಮೊಗ್ಗಿನಂತದನ್ನು ಕೂಡಿಸಲಾಗಿತ್ತು. ಇದರಲ್ಲಿಯ ಕೆಲ ಮರಗಳ ಹೆಸರು ಈಗಿನವರಿಗೆ ಗೊತ್ತಿದೆಯೊ ಇಲ್ಲವೋ ಅನಿಸಿ ಅಚ್ಚರಿಪಟ್ಟ. ಚಹಾ ಕುಡಿಯುತ್ತ ಕುಳಿತವನಿಗೆ, ಹೊರಗೆ ಚಳಿಯಿತ್ತು ಆದರಿಲ್ಲಿ ಬೆಚ್ಚಗಿದೆ ಅನ್ನುವುದು ಅರಿವಾಯ್ತು.

'ಬ್ಯಾಸಗಿ ಸಮಯ್ದಾಗ ವಳಗ ಸೆಕಿ ಇರ್ತದೇನ್ರೀ ಆನಂದ?' ಕೇಳಿದ.

'ಇಲ್ಲ. ಹೊರಗಿಗಿಂತ ಒಳಗೆ ಕನಿಷ್ಠ ನಾಕು ಡಿಗ್ರಿ ಕಮ್ಮಿ ಇರತದೆ. ಒಳಗಿನ ಕೋಣೆಗಳಲ್ಲಿ ಇನ್ನೂ ಕಮ್ಮಿ.' ಅಂದ.

'ನಮ್ಮ ಬೆಂಗ್ಳೂರಾಗ ಇಷ್ಟು ಮಣ್ಣೇ ಸಿಗದು ಕಷ್ಟ ಬಿಡ್ರಿ! ಇನ್ನು...' ನಕ್ಕ.

ಅಗ್ರಿಕಲ್ಚರ್‌ನಲ್ಲಿ ಎಂ.ಎಸ್ಸಿ ಮಾಡಿದ ಆನಂದನಿಗೆ ಬರೆಯುವ ಹವ್ಯಾಸವಿತ್ತು. ಕೃಷಿಯ ವಿಷಯಕ್ಕೆ ಸಂಬಂಧಿಸಿ ಪತ್ರಿಕೆಗಳಲ್ಲಿ ಲೇಖನ ಬರೆಯುತ್ತಿದ್ದ. ಅವನ ಅನೇಕ ಕಾಲೇಜು ಸಹಪಾಠಿಗಳು ಬೆಂಗಳೂರಲ್ಲಿ ಕೆಲಸದಲ್ಲಿದ್ದರು. ಇದೆಲ್ಲ ಕಾರಣದಿಂದ ಕೆಲವು ಪತ್ರಕರ್ತರ ಪರಿಚಯ ಅವನಿಗಿತ್ತು. ನಿಶೀತ ಪಾಟೀಲ ಕನ್ನಡದ ಪ್ರಸಿದ್ಧ ದಿನಪತ್ರಿಕೆ ಒಂದರಲ್ಲಿ ಕೆಲಸ ಮಾಡುತ್ತಾನೆ. ಶನಿವಾರ ಬರುವ ಪುರವಣಿಯ ಹೊಣೆಯೂ ಅವನದಾಗಿತ್ತು. ಅದರಲ್ಲಿ ಇತ್ತೀಚೆಗಿನ ಸಿನಿಮಾ, ಟೀವಿ ಧಾರಾವಾಹಿಗಳ ಬಗ್ಗೆಯು ಟೀಕೆ ಟಿಪ್ಪಣಿಯಿರುತ್ತಿತ್ತು. ಅವನ ನಿರೂಪಣೆಯ ವೈಖರಿಯಿಂದ ಆ ಕಾಲಂ ಜನಮೆಚ್ಚುಗೆ ಗಳಿಸಿತ್ತು. ಇದ್ದಕ್ಕಿದ್ದಂತೆ ಟಿಆರ್‌ಪಿ ಏರಿಸಿಕೊಂಡ 'ಸಿಹಿನೀರ ಕಡಲು' ಬಗ್ಗೆ ಬರೆಯ ಹೊರಟವನಿಗೆ ಒಂದು ಸಾರಿ ಆ ಜಾಗ ನೋಡಿಬಿಡಬೇಕೆನಿಸಿತ್ತು. ಅದು ತನಗೆ ಪರಿಚಯದ ಆನಂದನಿಗೆ ಸೇರಿದ್ದು ಅಂತ ಗೊತ್ತಾದಾಗ ಫೋನು ಮಾಡಿ ಹೊರಟುಬಿಟ್ಟ.

ಆನಂದ ಪಾಟೀಲನಿಗೆ ಸ್ನಾನದ ಮನೆ ತೋರಿಸಿದ. ಬೆಳಗಿನ ಕೆಲಸಗಳನ್ನು ಮುಗಿಸಿ ಸ್ನಾನ ಮಾಡಿ ಬಂದ ಪಾಟೀಲ ಆನಂದನ ಜೊತೆ ದೋಸೆ ಚಹಾ ಮುಗಿಸಿದ. ಮತ್ತೆ ಹಜಾರದಲ್ಲಿ ಕುಳಿತವನಿಗೆ ಆ ಮನೆ, ಪರಿಸರದ ಸೆಳೆತ ಶುರುವಾಯ್ತು.

'ಅಲ್ರೀ ಆನಂದ, ಯಾವ್ಯಾವ್ದೋ ಕೋಟೆ ಕೊತ್ತಲಗಳ ಬಗ್ಗೆ, ಅವಶೇಷಗಳ ಬಗ್ಗೆ ಪದೇಪದೇ ಬರದೇನಿ; ಮತ್ತಮತ್ತ ಓದಿದೇನಿ. ಆದ್ರ ಇಂತದ್ದೊಂದು ಇಲ್ಲಿ ಅದಾ ಅಂದ್ರ ಅಚ್ಚರಿಯಾಗ್ತದ...' ಉದ್ಗರಿಸಿದ.